ಒ್ ಎಸ ನಂಃ 98/2017.
ಪಿ.ಡಬ್ಲ್ಯು. 2

ಇಂದು ದಿಃ 16.09.2019 ರಂದುಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಅಸಲು ದಾವೆ 98/2017ರ ಪ್ರತಿವಾದಿಯರ ಪರ ಶ್ರೀ.ಎ ವಿ ಎಸ ವಕೀಲರಿಂದ,**

1. ಅಸಲು ದಾವೆ 98/2017ರ ಪ್ರತಿವಾದಿಯರು ಮೊದಲು ಇನ್ನೊಂದು ಅಸಲು ದಾವೆ ಸಂಖ್ಯೆ 314/2013ನ್ನು ಹಾಕಿದ್ದರು ಎಂದರೆ ಸರಿ. ಸದರಿ ದಾವೆ ಸಲ್ಲಿಸಿದ ನಂತರ ನಾವು ಈ ಪ್ರಸ್ತುತ ದಾವೆ 98/2017ನ್ನು ಸಲ್ಲಿಸಿದ್ದೇವೆ ಎಂದರೆ ಸರಿ. ಈ ಸದರಿ ಅಸಲು ದಾವೆ 98/2017ನ್ನು ನಾನು ಮತ್ತು ನನ್ನ ತಾಯಿ ಸೇರಿ ಹಾಕಿದ್ದೇವೆ ಎಂದರೆ ಸರಿ.

2. ಸದರಿ ಅಸಲು ದಾವೆ 98/2017ಕ್ಕೆ ನಾನೇ ಮಾಹಿತಿಯನ್ನು ಕೊಟ್ಟಿದ್ದೇನೆ. ಸದರಿ ದಾವೆಯನ್ನು ನಾನು ನನ್ನ ಚಿಕ್ಕಪ್ಪಂದಿರ ಮೇಲೆ ಹಾಕಿದ್ದೇನೆ. ಸದರಿಯವರ ಹೆಸರೆಂದರೆ ಕೇದಾರೆಪ್ಪಾ ಹನಮಂತಪ್ಪಾ, ಬಸವರಾಜ, ಹೇಮಲತಾ ಮತ್ತು ಯಲ್ಲವ್ವ ಇವರ ಮೇಲೆ ಹಾಕಿದ್ದೇನೆ.

3. ನನ್ನ ಅಜ್ಜನಿಗೆ ನನ್ನ ತಂದೆ, ಕೇದಾರಪ್ಪ, ಹನಮಂತಪ್ಪಾ, ಬಸವರಾಜ ಮಕ್ಕಳಾಗಿರುತ್ತಾರೆ. ಸದರಿ ಕೆದಾರೆಪ್ಪ ಇವರಿಗೆ ಮಲ್ಲೇಶ, ಸುರೇಶ ಇನ್ನೊಬ್ಬನ ಹೆಸರು ಗೊತ್ತಿಲ್ಲ ಹಾಗೂ ಒಬ್ಬ ಹೆಣ್ಣು ಮಗಳು ಇದ್ದು ಅವಳ ಹೆಸರು ನನಗೆ ಗೊತ್ತಿಲ್ಲ. ನಾನು 2ನೇ ತರಗತಿ ಒ್ದಿರುತ್ತೇನೆ. ನಾನು 5ನೇ ತರಗತಿವರೆಗೆ ಒ್ದಿದ್ದೇನೆ ಎಂದರೆ ಸರಿಯಲ್ಲ. ನಾನು ಶಿಬಾರಗಟ್ಟಿ ಗ್ರಾಮದಲ್ಲಿ ಒ್ದಿದ್ದೇನೆ.

4. ನಾನು 01/11/1980ರಲ್ಲಿ ಹುಟ್ಟಿರುತ್ತೇನೆ. ನಾನು ಪ್ರಸ್ತುತವಾಗಿ ಶಿಬಾರಗಟ್ಟಿ ಗ್ರಾಮದಲ್ಲಿ ನನ್ನ ಅಜ್ಜ ಮತ್ತು ಅಮ್ಮನೊಂದಿಗೆ ವಾಸ ಮಾಡಿಕೊಂಡಿದ್ದೇನೆ. ನಾನು ಈ ಪ್ರಸ್ತುತ ದಾವೆಯಲ್ಲಿ ನನ್ನ ವಿಳಾಸ ಶಿಬಾರಗಟ್ಟಿ ಎಂದು ಬರೆಸಿದ್ದೇನೆ. ಪ್ರತಿವಾದಿಯರು ನನಗೆ ಅವರು ಹಾಕಿದ ಅಸಲು ದಾವೆ 109/17ರಲ್ಲಿ ಶಿಬಾರಗಟ್ಟಿ ಗ್ರಾಮದ ವಿಳಾಸಕ್ಕೆ ನೋಟಿಸ ಕಳುಹಿಸಿದ್ದರು.

5. ನಾನು ಆಸ್ಪತ್ರೆಯಲ್ಲಿ ಜನಿಸಿದ್ದೆನೋ ಅಥವಾ ಮನೆಯಲ್ಲಿ ಜನಿಸಿದ್ದೆನೋ ನನಗೆ ಗೊತ್ತಿಲ್ಲ. ನಾನು ನನ್ನ ಜನನ ಪ್ರಮಾಣ ಪತ್ರವನ್ನು ಈ ದಾವೆಯಲ್ಲಿ ಹಾಜರು ಪಡಿಸಿಲ್ಲ. ನಾನು ಹಾಜರು ಪಡಿಸಿದ ಪಾನ ಕಾರ್ಡ, ಮತದಾರರ ಗುರುತಿನ ಚೀಟಿಯನ್ನು 2012-2013ರಲ್ಲಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಪಡಿತರ ಚೀಟಿ ಇರುವುದಿಲ್ಲ.

6. ನಾನು ನನ್ನ ಶಾಲಾ ದಾಖಲಾತಿಯನ್ನು ಹಾಜರು ಪಡಿಸಬಲ್ಲೆ. ನನ್ನ ಶಾಲೆಯ ದಾಖಲಾತಿಯಲ್ಲಿ ನನ್ನ ಹೆಸರು ಮಂಜುನಾಥ ಮಡಿವಾಳಪ್ಪ ಕೋಮೋಜಿ ಎಂದು ಇರುತ್ತದೆ ಎಂದರೆ ಸರಿಯಲ್ಲ. 2 ನೇ ವಾದಿ ನನ್ನ ತಾಯಿಯ ಮದುವೆ ಸದರಿ ಮಡಿವಾಳಪ್ಪನ ಜೊತೆ ಮದುವೆಯಾಗಿದ್ದು ನಾನು ಮಡಿವಾಳಪ್ಪನ ಮಗ ಎಂದರೆ ಸರಿಯಲ್ಲ. ಫಕ್ಕೀರಪ್ಪ ಇವನಿಗೆ ತಲೆ ಸರಿ ಇಲ್ಲ ಎಂದು ನನ್ನ ತಾಯಿ ಶಿಬಾರಗಟ್ಟಿ ಗ್ರಾಮಕ್ಕೆ ಹೋಗಿ ಮಡಿವಾಳಪ್ಪನೊಂದಿಗೆ ಮದುವೆ ಮಾಡಿಕೊಂಡಿದ್ದಳು ಎಂದರೆ ಸರಿಯಲ್ಲ. ಪ್ರತಿವಾದಿಯರ ಮನೆತನದ ಆಸ್ತಿಗಳನ್ನು ಎತ್ತಿಹಾಕಬೇಕೆಂಬ ಉದ್ದೇಶದಿಂದ ನಾನು ದಾಖಲಾತಿಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಗಳ ಮೇಲೆ ಯಾವುದೇ ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ.

7. ನಾನು 2013ರ ಮತದಾರರ ಯಾದಿಯನ್ನು ತಂದು ಹಾಜರು ಪಡಿಸುತ್ತೇನೆ. ನನ್ನ ಶಾಲೆಯ ದಾಖಲಾತಿಯಲ್ಲಿ ನನ್ನ ತಂದೆಯ ಹೆಸರು ಮಡಿವಾಳಪ್ಪ ಕೋಮೋಜಿ ಎಂದು ಈಗ ನಾನು ಪ್ರಸ್ತುತ ದಾಖಲಾತಿಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾಖಲಾತಿಗಳನ್ನು ನಾನು ಉದ್ದೇಶಪೂರ್ವಕವಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವತ್ತೂ ಶಿಬಾರಗಟ್ಟಿ ಗ್ರಾಮದಲ್ಲಿ ವಾಸವಾಗಿದ್ದು ಕೋಗಿಲಗೇರಿ ಗ್ರಾಮಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಫಕ್ಕೀರಪ್ಪನ

**ಒ್ ಎಸ ನಂಃ 98/2017.**
**ಪಿ.ಡಬ್ಲ್ಯು. 2**

ಮಗ ಅಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಯನ್ನು ಕೇವಲ ಆಸ್ತಿ ಎತ್ತಿಹಾಕಬೇಕೆಂಬ ಉದ್ದೇಶದಿಂದ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).
ಓ ಹೇ ಕೇ ಸರಿ ಅದೆ,

2 ನೇ ಹೆ ಹಿ ದಿ ನ್ಯಾ ಮತ್ತು ಜೆಎಂಎಫಸಿ,.
ಧಾರವಾಡ.